1884ನೇ ಇಸವಿ ಅರ್ಜೀ ನಂಬರ್ 114.

ಮೃತಪಟ್ಟ ವೆಂಕಟರಮಣ ದೀಕ್ಷಿತನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ನರಸಮ್ಮನು, ಮೃತಪಟ್ಟ ಸದರೀ ವೆಂಕಟರಮಣ ದೀಕ್ಷಿತನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ತೀರ್ಥಹಳ್ಳೀ ತಾಲ್ಲೂಕು ಶೇತೂರು ಮಾಗಣಿ ಮುಳಬಾಗಲ್ ಸ್ಥಳದ ನರಸಮ್ಮನು, ಸದರೀ ಮುಳಬಾಗಲ್ ವಾಸಸ್ಥನಾಗಿ ಮೃತಪಟ್ಟ ವೆಂಕಟರಮಣ ದೀಕ್ಷಿತನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನರಸಮ್ಮನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣ ದೀಕ್ಷಿತನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 115.

ಮೃತಪಟ್ಟ ಗುರುಸಿದ್ದಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಮಲ್ಲವ್ವನು, ಮೃತಪಟ್ಟ ಸದರೀ ಗುರುಸಿದ್ದಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ಅಜ್ಜಂಪುರ ಮಾಗಣಿ ಸೊಲ್ಲಾಪುರ ಸ್ಥಳದ ಮಲ್ಲವ್ವನು, ಸದರೀ ಸೊಲ್ಲಾಪುರ ಗ್ರಾಮದ ವಾಸಸ್ಥನಾಗಿಮೃತಪಟ್ಟ ಗುರುಸಿದ್ದಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ಮೃತಪಟ್ಟ ಗುರುಸಿದ್ದಪ್ಪನ ಮಗ ಸಿದ್ದರಾಮ ಯಂಬವನಿಗೆ ಗಾರ್ಡಿಯನ್ನಾಗಿ ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮಲ್ಲವ್ವನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರುಸಿದ್ದಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ನವೆಂಬರ್ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಸ್ಯ 1884ನೇ ಇಸವಿ ಅಕ್ಟೋಬರ್ ತಿಂಗಳ ಕಾಲಸ್ಥಿತೀ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ಹೆಡ್ ಕ್ವಾರ್ಟರ್ಸ್‌ನಲ್ಲಿ 6 ಅಂಗುಲ 69 ಸೆಂಟಿಸ್ ಮಳೆ ಅಳೆಯಲ್ಪಟ್ಟಿತು. ಡಿಸ್ಟ್ರಿಕ್ಟ್ ಮುಳೆ ಸಾಧಾರಣವಾಗಿ ಮಳೆ ಬಿದ್ದು ಬೆಳೆಯಲ್ಲಿರುವ ಫಸಲಿಗೆ ಮೇಲು ಉಂಟಾಯಿತು; ತಲಾವ್‌ಗಳ ಕೆಳಗಿನ ತರೀ ಸಾಗುವಳಿ ಕೆಲಸಗಳಿಗೆ ಯಿನ್ನೂ ಮಳೆ ಬೇಕಾಗಿ ಯಿಧೆ.

ಫಸಲಿನ ಸ್ಥಿತಿ.—ಬೆಳೆಯಲ್ಲಿರುವ ಫಸಲ್ ಛಂದಾಗಿಧೆ. ಅನೇಕ ಸ್ಥಳಗಳಲ್ಲಿ ಹುರಳಿ ಪೀರಾವಾಯಿತು.

ಜನಾರೋಗ್ಯ.—ಸಾಧಾರಣವಾಗಿ ಛಂದಾಗಿಧೆ. ಸೆಪ್ಟಂಬರ್ ಮಾಹೆಯಲ್ಲಿ 644 ಮಂದಿಯೂ ಅದರ ಹಿಂದಿನ ತಿಂಗಳಲ್ಲಿ 619 ಮಂದಿಯೂ ಮೃತಪಟ್ಟಿರುತ್ತಾರೆ; ಪೊಕ್ಕಾ ಬಿಲಾ 25 ಮಂದಿ ಜಾಸ್ತಿ, ಮುಖ್ಯವಾಗಿ ಜ್ವರದಿಂದಲೇ ಮೃತಪಟ್ಟಿರುತ್ತಾರೆ.

ಕಾಲ್ನಡಿ.—ಆರೋಗ್ಯವಾಗಿವೆ, ಮತ್ತು ಮೇವು ನೀರಿಲ್ಲದೆ ನಾದಾರಾಗಿದ್ದ ಕಾಲ್ನಡಿಗಳು ಈಗ ಕುದುರಿಕೊಳ್ಳುತ್ತಾ ಯಿವೆ. ಸದರೀ ಮಾಹೆಯಲ್ಲಿ 2,465 ಕಾಲ್ನಡಿಗಳೂ ಅದರ ಹಿಂದಿನ ತಿಂಗಳಲ್ಲಿ 2,464 ಕಾಲ್ನಡಿಗಳೂ ಹೋಗಿರುತವೆ. ಸದರೀ ಮಾಹೆಯಲ್ಲಿ ದುಷ್ಟ ಮೃಗಗಳಿಂದ 170 ಕಾಲ್ನಡಿಗಳು ಕೊಲ್ಲಲ್ಪಟ್ಟವು.